ಸೃಜನಿ

SRUJANI: Indian Journal of Innovative Research and Development (SIJIRD)
Volume-5 Issue 3, July-August 2026, Pp. 75-85
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಸೋಲಿಗ ಬುಡಕಟ್ಟು ಸಮುದಾಯದ ಸಾಂಪ್ರದಾಯಿಕ ವೈದ್ಯಕೀಯ ಜ್ಞಾನ ಮೀಮಾಂಸೆ: ರೋಗಗಳ ವರ್ಗೀಕರಣ, ರೋಗನಿರ್ಣಯ ತಂತ್ರ ಮತ್ತು ಚಿಕಿತ್ಸಾ ವಿಧಾನ

**ಸಂಗೀತ ಆರ್[1] ಮತ್ತು ಡಾ. ಎಸ್. ಯಶೋದ[2]**

[1]ಸಂಶೋಧನಾ ವಿದ್ಯಾರ್ಥಿ, [2]ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು

ಸಮಾಜಶಾಸ್ತ್ರ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು

***Abstract:***

*ಇಂದಿನ ಆಧುನಿಕ ವೈದ್ಯಕೀಯ ಯುಗದಲ್ಲಿ ಬುಡಕಟ್ಟು ಸಮುದಾಯಗಳ ಸಾಂಪ್ರದಾಯಿಕ ವೈದ್ಯಕೀಯ ಜ್ಞಾನವು ಕಣ್ಮರೆಯಾಗುತ್ತಿರುವ ಹಿನ್ನೆಲೆಯಲ್ಲಿ, ಸೋಲಿಗ ಬುಡಕಟ್ಟು ಸಮುದಾಯದ ವೈದ್ಯಕೀಯ ಜ್ಞಾನ ಮೀಮಾಂಸೆಯನ್ನು ದಾಖಲಿಸುವುದು ಈ ಅಧ್ಯಯನದ ಉದ್ದೇಶವಾಗಿದೆ. ಗುಣಾತ್ಮಕ ಸಂಶೋಧನಾ ವಿಧಾನವನ್ನು ಅನುಸರಿಸಿ, ಚಾಮರಾಜನಗರ ಜಿಲ್ಲೆಯ ವಿವಿಧ ಅರಣ್ಯ ಪ್ರದೇಶಗಳಲ್ಲಿ ಕ್ಷೇತ್ರಕಾರ್ಯ ನಡೆಸಲಾಗಿದೆ. ಉದ್ದೇಶಿತ ಮಾದರಿ ಆಯ್ಕೆ ಮೂಲಕ 30 ಮಂದಿ ಸಾಂಪ್ರದಾಯಿಕ ವೈದ್ಯರು ಹಾಗೂ 30 ಮಂದಿ ಅನುಭವಿ ಮಹಿಳೆಯರಿಂದ ಸಹಭಾಗಿ ಅವಲೋಕನ ಮತ್ತು ಸಂದರ್ಶನಗಳ ಮೂಲಕ ದತ್ತಾಂಶ ಸಂಗ್ರಹಿಸಲಾಗಿದೆ. ಅಧ್ಯಯನದಿಂದ ಸೋಲಿಗರ ವೈದ್ಯಕೀಯ ಪದ್ಧತಿಯು ಆಯುರ್ವೇದದ ತ್ರಿದೋಷ ಸಿದ್ಧಾಂತದೊಂದಿಗೆ ತಾತ್ವಿಕ ಸಾಮ್ಯತೆಯನ್ನು ಹೊಂದಿರುವುದು ತಿಳಿದುಬಂದಿದೆ. ನಾಡಿಮಿಡಿತ, ಮೂತ್ರ, ನಾಲಿಗೆ ಮತ್ತು ಕಣ್ಣುಗಳ ಪರಿಶೀಲನೆಯ ಮೂಲಕ ರೋಗನಿರ್ಣಯ ಮಾಡುವ ಅವರ ಅನುಭವಾಧಾರಿತ ವಿಧಾನಗಳು ವೈಜ್ಞಾನಿಕ ಮಹತ್ವವನ್ನು ಹೊಂದಿವೆ. ಚಿಕಿತ್ಸೆಗೆ ಸೇವಾಭಾವದಿಂದ ಮುಂದಾಗುವ ಅವರ ವೃತ್ತಿಪರ ನೈತಿಕತೆಯು ಮಾದರಿಯಾಗಿದೆ. ಈ ಅಮೂಲ್ಯ ಮೌಖಿಕ ಜ್ಞಾನವನ್ನು ದಾಖಲಿಸಿ ಸಂರಕ್ಷಿಸುವುದು ವೈದ್ಯಕೀಯ ಬಹುತ್ವ, ಸಾಂಸ್ಕೃತಿಕ ಪರಂಪರೆ ಹಾಗೂ ಭವಿಷ್ಯದ ಸಂಶೋಧನೆಗಳಿಗೆ ಅತ್ಯಂತ ಅಗತ್ಯವಾಗಿದೆ.*

**Keywords:** *ಸೋಲಿಗ ಬುಡಕಟ್ಟು, ಸಾಂಪ್ರದಾಯಿಕ ವೈದ್ಯಕೀಯ, ಜ್ಞಾನ ಮೀಮಾಂಸೆ, ರೋಗನಿರ್ಣಯ, ಚಿಕಿತ್ಸಾ ವಿಧಾನ.*

## ಪೀಠಿಕೆ

ಆರೋಗ್ಯವು ಪ್ರತಿಯೊಂದು ಸಮಾಜದ ಮೂಲಭೂತ ಅಗತ್ಯವಾಗಿದ್ದು, ಅದನ್ನು ಕಾಪಾಡಿಕೊಳ್ಳಲು ವಿವಿಧ ಸಮುದಾಯಗಳು ತಮ್ಮದೇ ಆದ ವೈದ್ಯಕೀಯ ಜ್ಞಾನ ಮತ್ತು ಚಿಕಿತ್ಸಾ ಪದ್ಧತಿಗಳನ್ನು ರೂಪಿಸಿಕೊಂಡಿವೆ. ವಿಶೇಷವಾಗಿ ಬುಡಕಟ್ಟು ಸಮುದಾಯಗಳು ಪ್ರಕೃತಿಯೊಂದಿಗೆ ಹೊಂದಿರುವ ನಿಕಟ ಸಂಬಂಧದ ಆಧಾರದ ಮೇಲೆ ಅನನ್ಯವಾದ ಸಾಂಪ್ರದಾಯಿಕ ಆರೋಗ್ಯ ರಕ್ಷಣಾ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಿವೆ. ಈ ಜ್ಞಾನವು ಕೇವಲ ಔಷಧೀಯ ಸಸ್ಯಗಳ ಬಳಕೆಗೆ ಸೀಮಿತವಾಗಿರದೆ, ಅವರ ಜೀವನಶೈಲಿ, ಪರಿಸರ, ನಂಬಿಕೆಗಳು, ಧಾರ್ಮಿಕ ಆಚರಣೆಗಳು ಮತ್ತು

***Please cite this article as:*** ಸಂಗೀತ, ಆರ್ ಮತ್ತು ಎಸ್.ಯಶೋದ. (2026). ಸೋಲಿಗ ಬುಡಕಟ್ಟು ಸಮುದಾಯದ ಸಾಂಪ್ರದಾಯಿಕ ವೈದ್ಯಕೀಯ ಜ್ಞಾನ ಮೀಮಾಂಸೆ: ರೋಗಗಳ ವರ್ಗೀಕರಣ, ರೋಗನಿರ್ಣಯ ತಂತ್ರ ಮತ್ತು ಚಿಕಿತ್ಸಾ ವಿಧಾನ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರಿಸರ್ಚ್ ಅಂಡ್ ಡೆವಲಪ್‌ಮೆಂಟ್,* 5(3), 75–85

ಸಾಮಾಜಿಕ ಮೌಲ್ಯಗಳೊಂದಿಗೆ ಅವಿನಾಭಾವ ಸಂಬಂಧ ಹೊಂದಿದೆ. ಹೀಗಾಗಿ, ಬುಡಕಟ್ಟು ವೈದ್ಯಕೀಯವು ಒಂದು ಸಮಗ್ರ ವೈದ್ಯಕೀಯ ಜ್ಞಾನ ವ್ಯವಸ್ಥೆ (Medical Knowledge System) ಹಾಗೂ ಸಾಂಸ್ಕೃತಿಕ ಪರಂಪರೆಯ ಪ್ರಮುಖ ಅಂಗವಾಗಿದೆ.

ಚಾಮರಾಜನಗರ ಜಿಲ್ಲೆಯ ಬಿಳಿಗಿರಿರಂಗನ ಬೆಟ್ಟ (ಬಿಆರ್‌ಟಿ) ಹಾಗೂ ಸುತ್ತಮುತ್ತಲಿನ ಅರಣ್ಯ ಪ್ರದೇಶಗಳಲ್ಲಿ ವಾಸಿಸುವ ಸೋಲಿಗ ಬುಡಕಟ್ಟು ಸಮುದಾಯವು ತಲೆಮಾರುಗಳಿಂದ ಮೌಖಿಕ ಪರಂಪರೆಯ ಮೂಲಕ ಸಾಂಪ್ರದಾಯಿಕ ವೈದ್ಯಕೀಯ ಜ್ಞಾನವನ್ನು ಸಂರಕ್ಷಿಸಿಕೊಂಡು ಬಂದಿದೆ. ಈ ಸಮುದಾಯದ ಆರೋಗ್ಯ ರಕ್ಷಣಾ ಮಾದರಿಯು ಕೇವಲ ರೋಗಲಕ್ಷಣಗಳಿಗೆ ಔಷಧ ನೀಡುವ ವ್ಯವಸ್ಥೆಯಾಗಿರದೆ, ಪ್ರಕೃತಿ, ಸಂಸ್ಕೃತಿ ಮತ್ತು ಬುಡಕಟ್ಟು ಪರಿಸರ ವಿಜ್ಞಾನದ ಪರಸ್ಪರ ಸಂಬಂಧಗಳಿಂದ ರೂಪುಗೊಂಡಿರುವ ಸಮಗ್ರ ವೈದ್ಯಕೀಯ ಜ್ಞಾನ ಮೀಮಾಂಸೆಯಾಗಿದೆ. ಈ ವೈದ್ಯಕೀಯ ಪದ್ಧತಿಯು ರೋಗಗಳ ಸ್ವರೂಪ, ಕಾರಣಗಳು, ರೋಗನಿರ್ಣಯ ಹಾಗೂ ಚಿಕಿತ್ಸಾ ವಿಧಾನಗಳ ಕುರಿತು ತನ್ನದೇ ಆದ ವಿಶಿಷ್ಟ ತಾತ್ವಿಕ ಮತ್ತು ಪ್ರಾಯೋಗಿಕ ನೆಲೆಗಳನ್ನು ಹೊಂದಿದೆ.

ಆಧುನಿಕ ವೈದ್ಯಕೀಯ ಪದ್ಧತಿಯು ವೈಜ್ಞಾನಿಕ ಪರೀಕ್ಷೆಗಳು ಮತ್ತು ಪ್ರಯೋಗಾಲಯಗಳ ಮೇಲೆ ಅವಲಂಬಿತವಾಗಿದ್ದರೆ, ಸೋಲಿಗರ ವೈದ್ಯಕೀಯ ಪದ್ಧತಿಯು ಅನುಭವಾಧಾರಿತ ಜ್ಞಾನ, ನಾಡಿಮಿಡಿತ, ಮೂತ್ರದ ಸ್ವರೂಪ, ನಾಲಿಗೆ, ಕಣ್ಣುಗಳ ಪರಿಶೀಲನೆ ಹಾಗೂ ರೋಗಿಯ ದೈಹಿಕ ಮತ್ತು ಮಾನಸಿಕ ಸ್ಥಿತಿಯ ಅವಲೋಕನದ ಆಧಾರದ ಮೇಲೆ ರೋಗವನ್ನು ಗುರುತಿಸುತ್ತದೆ. ಅಲ್ಲದೆ, ರೋಗವನ್ನು ಕೇವಲ ದೈಹಿಕ ಸಮಸ್ಯೆಯಾಗಿ ಪರಿಗಣಿಸದೆ, ಮಾನಸಿಕ, ಸಾಮಾಜಿಕ, ಪರಿಸರ ಹಾಗೂ ಸಾಂಸ್ಕೃತಿಕ ಅಂಶಗಳ ಸಮಗ್ರ ಪರಿಣಾಮವಾಗಿ ಅರ್ಥೈಸುತ್ತದೆ. ಈ ದೃಷ್ಟಿಕೋನವು ಸೋಲಿಗರ ವೈದ್ಯಕೀಯ ಜ್ಞಾನ ವ್ಯವಸ್ಥೆಯ ವೈಶಿಷ್ಟ್ಯವನ್ನು ಪ್ರತಿಬಿಂಬಿಸುತ್ತದೆ.

ಜಾಗತೀಕರಣ, ನಗರೀಕರಣ ಮತ್ತು ಆಧುನಿಕ ಆರೋಗ್ಯ ಸೇವೆಗಳ ವಿಸ್ತರಣೆಯಿಂದ ಬುಡಕಟ್ಟು ಸಮುದಾಯಗಳ ಸಾಂಪ್ರದಾಯಿಕ ವೈದ್ಯಕೀಯ ಜ್ಞಾನವು ಕ್ರಮೇಣ ಅಳಿವಿನಂಚಿನತ್ತ ಸಾಗುತ್ತಿದೆ. ಈ ಹಿನ್ನೆಲೆಯಲ್ಲಿ, ಸೋಲಿಗ ಸಮುದಾಯದ ವೈದ್ಯಕೀಯ ಜ್ಞಾನವನ್ನು ದಾಖಲಿಸಿ, ಅದರ ವೈಜ್ಞಾನಿಕ, ಸಾಂಸ್ಕೃತಿಕ ಮತ್ತು ಸಾಮಾಜಿಕ ಮಹತ್ವವನ್ನು ವಿಶ್ಲೇಷಿಸುವುದು ಅತ್ಯಂತ ಅಗತ್ಯವಾಗಿದೆ.

ಆದ್ದರಿಂದ, ಪ್ರಸ್ತುತ ಅಧ್ಯಯನವು ಚಾಮರಾಜನಗರ ಜಿಲ್ಲೆಯ ಸೋಲಿಗ ಸಾಂಪ್ರದಾಯಿಕ ವೈದ್ಯರ ಜ್ಞಾನಾಧಾರಿತ ವರ್ಗೀಕರಣ, ಚಿಕಿತ್ಸಾ ಪರಿಣತಿಯ ಆಧಾರದ ಮೇಲಿನ ವೈದ್ಯರ ವಿಧಗಳು, ರೋಗಗಳ ಸಾಂಸ್ಕೃತಿಕ ವರ್ಗೀಕರಣ, ತಾಂತ್ರಿಕೇತರ ರೋಗನಿರ್ಣಯ ವಿಧಾನಗಳು ಹಾಗೂ ಚಿಕಿತ್ಸಾ ಪ್ರಕ್ರಿಯೆಗಳ ತಾತ್ವಿಕ ಮತ್ತು ಪ್ರಾಯೋಗಿಕ ಆಯಾಮಗಳನ್ನು ದಾಖಲಿಸಿ ವಿಶ್ಲೇಷಿಸುತ್ತದೆ. ಈ ಅಧ್ಯಯನವು ಸೋಲಿಗರ ಸಾಂಪ್ರದಾಯಿಕ ವೈದ್ಯಕೀಯ ಜ್ಞಾನವನ್ನು ದಾಖಲಿಸುವುದರ ಜೊತೆಗೆ, ಭಾರತೀಯ ವೈದ್ಯಕೀಯ ಪರಂಪರೆ, ಬುಡಕಟ್ಟು ಜ್ಞಾನ ವ್ಯವಸ್ಥೆಗಳು ಹಾಗೂ ವೈದ್ಯಕೀಯ ಮಾನವಶಾಸ್ತ್ರದ ಅಧ್ಯಯನಗಳಿಗೆ ಮಹತ್ವದ ಕೊಡುಗೆಯನ್ನು ನೀಡುವ ಉದ್ದೇಶವನ್ನು ಹೊಂದಿದೆ.

**ಉದ್ದೇಶಗಳು**

- ಚಾಮರಾಜನಗರ ಜಿಲ್ಲೆಯ ಸೋಲಿಗ ಬುಡಕಟ್ಟು ಸಮುದಾಯದ ಸಾಂಪ್ರದಾಯಿಕ ವೈದ್ಯಕೀಯ ವ್ಯವಸ್ಥೆಯಲ್ಲಿ ಚಿಕಿತ್ಸಾ ಪರಿಣತಿ ಹಾಗೂ ವಿಶೇಷ ಜ್ಞಾನದ ಆಧಾರದ ಮೇಲೆ ಅಸ್ತಿತ್ವದಲ್ಲಿರುವ ಸಾಂಪ್ರದಾಯಿಕ ವೈದ್ಯರ ಜ್ಞಾನಾಧಾರಿತ ವರ್ಗೀಕರಣವನ್ನು ದಾಖಲಿಸಿ ವಿಶ್ಲೇಷಿಸುವುದು.

- ಸೋಲಿಗ ಸಮುದಾಯದ ಸಾಂಪ್ರದಾಯಿಕ ವೈದ್ಯಕೀಯಪದ್ಧತಿಯಲ್ಲಿ ಅಳವಡಿಸಿಕೊಂಡಿರುವ ರೋಗಗಳ ಸಾಂಸ್ಕೃತಿಕ ವರ್ಗೀಕರಣ, ತಾಂತ್ರಿಕೇತರ ರೋಗನಿರ್ಣಯ ವಿಧಾನಗಳು ಹಾಗೂ ಚಿಕಿತ್ಸಾ ಸಂಹಿತೆಯ ತಾತ್ವಿಕ ಮತ್ತು ಪ್ರಾಯೋಗಿಕ ನೆಲೆಗಳನ್ನು ಅಧ್ಯಯನ ಮಾಡಿ ಅವುಗಳ ವೈಶಿಷ್ಟ್ಯವನ್ನು ವಿಶ್ಲೇಷಿಸುವುದು.

**ಅಧ್ಯಯನದ ಪ್ರಾಮುಖ್ಯತೆ**

ಸೋಲಿಗ ಬುಡಕಟ್ಟು ಸಮುದಾಯದ ಸಾಂಪ್ರದಾಯಿಕ ವೈದ್ಯಕೀಯ ಜ್ಞಾನವು ಯಾವುದೇ ಆಧುನಿಕ ತಂತ್ರಜ್ಞಾನ ಅಥವಾ ಪ್ರಯೋಗಾಲಯಗಳ ನೆರವಿಲ್ಲದೆ ನಾಡಿಮಿಡಿತ, ದೈಹಿಕ ಲಕ್ಷಣಗಳು ಹಾಗೂ ಅನುಭವಾಧಾರಿತ ಜ್ಞಾನದ ಮೂಲಕ ರೋಗನಿರ್ಣಯ ಮಾಡುವ ವಿಶಿಷ್ಟ ಆರೋಗ್ಯ ರಕ್ಷಣಾ ವ್ಯವಸ್ಥೆಯಾಗಿದೆ. ರೋಗಗಳ ವರ್ಗೀಕರಣ, ಚಿಕಿತ್ಸಾ ಪರಿಣತಿ ಹಾಗೂ ಪಥ್ಯಾಧಾರಿತ ಚಿಕಿತ್ಸಾ ಸಂಹಿತೆಗಳು ಅವರ ವೈದ್ಯಕೀಯ ಜ್ಞಾನದ ವೈಜ್ಞಾನಿಕತೆ ಮತ್ತು ಸಾಂಸ್ಕೃತಿಕ ಮಹತ್ವವನ್ನು ಪ್ರತಿಬಿಂಬಿಸುತ್ತವೆ. ಆದರೆ, ನಗರೀಕರಣ, ಜಾಗತೀಕರಣ ಮತ್ತು ಮೌಖಿಕ ಪರಂಪರೆಯ ಕ್ಷೀಣತೆಯಿಂದ ಈ ಅಮೂಲ್ಯ ಜ್ಞಾನವು ಅಳಿವಿನ ಅಪಾಯವನ್ನು ಎದುರಿಸುತ್ತಿದೆ. ಆದ್ದರಿಂದ, ಸೋಲಿಗ ಸಮುದಾಯದ ಸಾಂಪ್ರದಾಯಿಕ ವೈದ್ಯಕೀಯ ಜ್ಞಾನವನ್ನು ವ್ಯವಸ್ಥಿತವಾಗಿ ದಾಖಲಿಸಿ ಸಂರಕ್ಷಿಸುವುದು ಬುಡಕಟ್ಟು ಜ್ಞಾನ ಪರಂಪರೆಯ ಉಳಿವು, ವೈದ್ಯಕೀಯ ಸಮಾಜಶಾಸ್ತ್ರದ ಅಧ್ಯಯನ ಹಾಗೂ ಭವಿಷ್ಯದ ಸಂಶೋಧನೆಗಳಿಗೆ ಅತ್ಯಂತ ಮಹತ್ವದ್ದಾಗಿದೆ.

**ಅಧ್ಯಯನ ಕ್ಷೇತ್ರ**

ಪ್ರಸ್ತುತ ಅಧ್ಯಯನಕ್ಕೆ ಚಾಮರಾಜನಗರ ಜಿಲ್ಲೆಯ ಅರಣ್ಯ ಮತ್ತು ಅರಣ್ಯದಂಚಿನಲ್ಲಿರುವ ಸೋಲಿಗ ಬುಡಕಟ್ಟು ಸಮುದಾಯದ ಹಾಡಿಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ.

**ಸಂಶೋಧನಾ ವಿಧಾನ**

ಸೋಲಿಗ ಬುಡಕಟ್ಟು ಸಮುದಾಯದ ಸಾಂಪ್ರದಾಯಿಕ ವೈದ್ಯಕೀಯ ಜ್ಞಾನ ಮೀಮಾಂಸೆಯನ್ನು ಅಧ್ಯಯನ ಮಾಡಲು ಈ ಸಂಶೋಧನೆಯಲ್ಲಿ ಗುಣಾತ್ಮಕ ಸಂಶೋಧನಾ ವಿಧಾನವನ್ನು ಅಳವಡಿಸಿಕೊಳ್ಳಲಾಗಿದೆ. ಸಾಂಪ್ರದಾಯಿಕ ವೈದ್ಯಕೀಯ ಜ್ಞಾನ, ರೋಗಗಳ ಸಾಂಸ್ಕೃತಿಕ ವರ್ಗೀಕರಣ, ರೋಗನಿರ್ಣಯ ವಿಧಾನಗಳು ಹಾಗೂ ಚಿಕಿತ್ಸಾ ಪದ್ಧತಿಗಳ ತಾತ್ವಿಕ ಮತ್ತು ಪ್ರಾಯೋಗಿಕ ನೆಲೆಗಳನ್ನು ಆಳವಾಗಿ ಅರ್ಥಮಾಡಿಕೊಳ್ಳಲು ಈ ವಿಧಾನವು ಸೂಕ್ತವಾಗಿದೆ. ಅಧ್ಯಯನಕ್ಕಾಗಿ ಅಗತ್ಯವಾದ ದತ್ತಾಂಶವನ್ನು ಮುಖ್ಯವಾಗಿ ಪ್ರಾಥಮಿಕ ಮೂಲಗಳಿಂದ ಸಂಗ್ರಹಿಸಲಾಗಿದೆ.

**ಮಾದರಿ ಆಯ್ಕೆ**

ಅಧ್ಯಯನಕ್ಕೆ ಅಗತ್ಯವಾದ ಮಾಹಿತಿ–ಸಮೃದ್ಧ ದತ್ತಾಂಶವನ್ನು ಸಂಗ್ರಹಿಸಲು ಅಸಂಭವನೀಯ ಮಾದರಿ ಆಯ್ಕೆ ವಿಧಾನದಡಿ ಉದ್ದೇಶಿತ ಮಾದರಿ ಆಯ್ಕೆ (Purposive Sampling) ತಂತ್ರವನ್ನು ಬಳಸಲಾಗಿದೆ. ಒಟ್ಟು 60 ಜನರನ್ನು ಮಾದರಿಯಾಗಿ ಆಯ್ಕೆ ಮಾಡಲಾಗಿದ್ದು, ಅವರಲ್ಲಿ 30 ಮಂದಿ ಪುರುಷ ಸಾಂಪ್ರದಾಯಿಕ ವೈದ್ಯರು ಹಾಗೂ 30 ಮಂದಿ ಸಾಂಪ್ರದಾಯಿಕ ಚಿಕಿತ್ಸೆ ಮತ್ತು ಸೂಲಗಿತ್ತಿ ಪದ್ಧತಿಯಲ್ಲಿ ಪರಿಣತಿ ಹೊಂದಿರುವ ಮಹಿಳೆಯರು ಸೇರಿದ್ದಾರೆ.

**ಮಾಹಿತಿ ಸಂಗ್ರಹಣಾ ವಿಧಾನಗಳು**

ಪ್ರಾಥಮಿಕ ಮಾಹಿತಿಯನ್ನು ಕ್ಷೇತ್ರಕಾರ್ಯದ ಮೂಲಕ ಅವಲೋಕನ, ಮುಖಾಮುಖಿ ಸಂದರ್ಶನ ಹಾಗೂ ಸಂದರ್ಶನ ಅನುಸೂಚಿಗಳ ಸಹಾಯದಿಂದ ಸಂಗ್ರಹಿಸಲಾಗಿದೆ. ಅವಲೋಕನದ ಮೂಲಕ ವೈದ್ಯರ ರೋಗನಿರ್ಣಯ ಮತ್ತು ಚಿಕಿತ್ಸಾ ಪ್ರಕ್ರಿಯೆಗಳನ್ನು ದಾಖಲಿಸಲಾಗಿದ್ದು, ಸಂದರ್ಶನಗಳ ಮೂಲಕ ಅವರ ಜ್ಞಾನ, ಅನುಭವ ಹಾಗೂ ಚಿಕಿತ್ಸಾ ಪದ್ಧತಿಗಳ ಕುರಿತು

ಮಾಹಿತಿಯನ್ನು ಪಡೆಯಲಾಗಿದೆ. ಸಂದರ್ಶನ ಅನುಸೂಚಿಯು ಮಾಹಿತಿಯನ್ನು ಕ್ರಮಬದ್ಧವಾಗಿ ಮತ್ತು ಸಮಗ್ರವಾಗಿ ದಾಖಲಿಸಲು ನೆರವಾಗಿದೆ.

**ಮಾಹಿತಿ ವಿಶ್ಲೇಷಣೆ**

**ಸೋಲಿಗ ಬುಡಕಟ್ಟು ವೈದ್ಯರ ವರ್ಗೀಕರಣ**

ಸೋಲಿಗ ಬುಡಕಟ್ಟು ಸಮುದಾಯದ ಆರೋಗ್ಯ ರಕ್ಷಣಾ ವ್ಯವಸ್ಥೆಯಲ್ಲಿ ವೈದ್ಯರು ಕೇವಲ ಔಷಧ ನೀಡುವ ವ್ಯಕ್ತಿಗಳಲ್ಲ; ಅವರು ಸಮುದಾಯದ ಸಾಂಪ್ರದಾಯಿಕ ಜ್ಞಾನ, ಸಂಸ್ಕೃತಿ, ನಂಬಿಕೆ ಹಾಗೂ ಚಿಕಿತ್ಸಾ ಪರಂಪರೆಯ ಪ್ರಮುಖ ವಾಹಕರಾಗಿದ್ದಾರೆ. ಸೋಲಿಗರ ವೈದ್ಯಕೀಯ ವ್ಯವಸ್ಥೆಯನ್ನು ವಿಶ್ಲೇಷಿಸಿದಾಗ, ವೈದ್ಯರನ್ನು ಒಂದೇ ವರ್ಗಕ್ಕೆ ಸೀಮಿತಗೊಳಿಸಲಾಗುವುದಿಲ್ಲ. ಬದಲಾಗಿ, ಅವರ ಚಿಕಿತ್ಸಾ ಪರಿಣತಿ, ರೋಗಗಳ ಸ್ವರೂಪ ಹಾಗೂ ಬಳಸುವ ಚಿಕಿತ್ಸಾ ವಿಧಾನಗಳ ಆಧಾರದ ಮೇಲೆ ವಿವಿಧ ವರ್ಗಗಳಾಗಿ ಗುರುತಿಸಬಹುದು. ಈ ವರ್ಗೀಕರಣವು ಸೋಲಿಗ ಸಮುದಾಯದ ಆರೋಗ್ಯ ರಕ್ಷಣಾ ವ್ಯವಸ್ಥೆಯ ಸಂಘಟಿತ ಸ್ವರೂಪ ಮತ್ತು ಜ್ಞಾನದ ವೈವಿಧ್ಯತೆಯನ್ನು ಪ್ರತಿಬಿಂಬಿಸುತ್ತದೆ.

***ಗಿಡಮೂಲಿಕೆ ವೈದ್ಯರು***

ಗಿಡಮೂಲಿಕೆ ವೈದ್ಯರು ಅರಣ್ಯದಲ್ಲಿ ದೊರೆಯುವ ಔಷಧೀಯ ಸಸ್ಯಗಳಾದ ಎಲೆ, ಬೇರು, ತೊಗಟೆ, ಹೂವು ಹಾಗೂ ಹಣ್ಣುಗಳನ್ನು ಬಳಸಿ ವಿವಿಧ ರೋಗಗಳಿಗೆ ಚಿಕಿತ್ಸೆ ನೀಡುತ್ತಾರೆ. ಅವರಿಗೆ ಔಷಧೀಯ ಸಸ್ಯಗಳ ಗುರುತಿಸುವಿಕೆ, ಅವುಗಳ ಔಷಧೀಯ ಗುಣಗಳು, ಔಷಧ ತಯಾರಿಕೆ ಹಾಗೂ ಬಳಕೆಯ ಕುರಿತು ಅನುಭವಾಧಾರಿತ ಜ್ಞಾನವಿರುತ್ತದೆ. ಸಾಮಾನ್ಯ ಜ್ವರ, ಹೊಟ್ಟೆನೋವು, ಚರ್ಮರೋಗಗಳು, ಗಾಯಗಳು ಹಾಗೂ ಕೆಲವು ದೀರ್ಘಕಾಲೀನ ಕಾಯಿಲೆಗಳಿಗೆ ಇವರು ಚಿಕಿತ್ಸೆ ನೀಡುತ್ತಾರೆ.

***ಗಿಡಮೂಲಿಕೆ ಮತ್ತು ಧಾರ್ಮಿಕ ವೈದ್ಯರು***

ಈ ವರ್ಗದ ವೈದ್ಯರು ಗಿಡಮೂಲಿಕೆ ಔಷಧಿಗಳೊಂದಿಗೆ ಧಾರ್ಮಿಕ ಆಚರಣೆಗಳು, ಮಂತ್ರೋಚ್ಚಾರಣೆ, ಪೂಜೆ ಹಾಗೂ ತಾಯಿತ ಕಟ್ಟುವಂತಹ ಸಾಂಪ್ರದಾಯಿಕ ವಿಧಾನಗಳನ್ನು ಅನುಸರಿಸುತ್ತಾರೆ. ಅವರ ನಂಬಿಕೆಯ ಪ್ರಕಾರ ಕೆಲವು ರೋಗಗಳು ದುಷ್ಟಶಕ್ತಿಗಳು, ದೃಷ್ಟಿದೋಷ, ಪೂರ್ವಜರ ಅಸಮಾಧಾನ ಅಥವಾ ಅಲೌಕಿಕ ಕಾರಣಗಳಿಂದ ಉಂಟಾಗುತ್ತವೆ. ಆದ್ದರಿಂದ ಔಷಧೋಪಚಾರದ ಜೊತೆಗೆ ಆಧ್ಯಾತ್ಮಿಕ ಮತ್ತು ಧಾರ್ಮಿಕ ಚಿಕಿತ್ಸೆಗಳನ್ನೂ ಒಟ್ಟಾಗಿ ಬಳಸುತ್ತಾರೆ.

***ಸೂಲಗಿತ್ತಿಯರು***

ಸೂಲಗಿತ್ತಿಯರು ಸೋಲಿಗ ಸಮುದಾಯದ ತಾಯಂದಿರು ಮತ್ತು ಶಿಶುಗಳ ಆರೋಗ್ಯ ರಕ್ಷಣೆಯಲ್ಲಿ ಪ್ರಮುಖ ಪಾತ್ರವಹಿಸುತ್ತಾರೆ. ವಿಶೇಷವಾಗಿ ಆರೋಗ್ಯ ಸೌಲಭ್ಯಗಳು ದೂರವಿರುವ ಅರಣ್ಯ ಪ್ರದೇಶಗಳಲ್ಲಿ ಗರ್ಭಿಣಿಯ ಆರೈಕೆ, ಸುರಕ್ಷಿತ ಹೆರಿಗೆ, ನವಜಾತ ಶಿಶುವಿನ ಆರೈಕೆ ಹಾಗೂ ಹೆರಿಗೆಯ ನಂತರದ ಪಥ್ಯ ಮತ್ತು ಆರೈಕೆಯ ಕುರಿತು ಅವರಿಗೆ ವಿಶಾಲವಾದ ಅನುಭವಾಧಾರಿತ ಜ್ಞಾನವಿದೆ. ಸಮುದಾಯದಲ್ಲಿ ತಾಯಿ ಮತ್ತು ಮಗುವಿನ ಆರೋಗ್ಯವನ್ನು ಕಾಪಾಡುವಲ್ಲಿ ಇವರ ಸೇವೆ ಅತ್ಯಂತ ಮಹತ್ವದ್ದಾಗಿದೆ.

**ಸೋಲಿಗರ ಬುಡಕಟ್ಟು ಸಮುದಾಯದಲ್ಲಿ ರೋಗಗಳ ವರ್ಗೀಕರಣ**

ಬುಡಕಟ್ಟು ಸಮಾಜದ ಆರೋಗ್ಯ ಮೀಮಾಂಸೆಯಲ್ಲಿ 'ರೋಗ' ಎಂಬುದು ಕೇವಲ ಜೈವಿಕ ಅಸಮತೋಲನದ ಫಲವಲ್ಲ; ಅದು ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ ಹಾಗೂ ಪರಿಸರ ಸಂಬಂಧಿತ ಅಂಶಗಳೊಂದಿಗೆ ನಿಕಟವಾಗಿ ಸಂಬಂಧ ಹೊಂದಿರುವ ಒಂದು ಸಮಗ್ರ ವಿದ್ಯಮಾನವಾಗಿದೆ. ಸೋಲಿಗ ಬುಡಕಟ್ಟು ಸಮುದಾಯವು ರೋಗಗಳನ್ನು ಕೇವಲ ದೈಹಿಕ ಲಕ್ಷಣಗಳ ಆಧಾರದ ಮೇಲೆ ಗುರುತಿಸುವುದಿಲ್ಲ; ಅವುಗಳ ಉಗಮ, ಕಾರಣ ಮತ್ತು ಪರಿಣಾಮಗಳನ್ನು ತಮ್ಮ ಸಾಂಸ್ಕೃತಿಕ ನಂಬಿಕೆಗಳು ಹಾಗೂ

ಜೀವನಾನುಭವಗಳ ಆಧಾರದ ಮೇಲೆ ವರ್ಗೀಕರಿಸುತ್ತದೆ. ಅವರ ದೃಷ್ಟಿಯಲ್ಲಿ ಆರೋಗ್ಯವು ಮನುಷ್ಯ, ಪ್ರಕೃತಿ ಮತ್ತು ಅಲೌಕಿಕ ಶಕ್ತಿಗಳ ನಡುವಿನ ಸಮತೋಲನದ ಸ್ಥಿತಿಯಾಗಿದ್ದು, ಈ ಸಮತೋಲನದಲ್ಲಿ ಉಂಟಾಗುವ ವ್ಯತ್ಯಾಸವೇ ರೋಗಕ್ಕೆ ಕಾರಣವಾಗುತ್ತದೆ. ಹೀಗಾಗಿ, ಸೋಲಿಗರ ರೋಗಗಳ ವರ್ಗೀಕರಣವು ಅವರ ವೈದ್ಯಕೀಯ ಜ್ಞಾನ ವ್ಯವಸ್ಥೆ ಮತ್ತು ಸಾಂಸ್ಕೃತಿಕ ವಿಶ್ವದೃಷ್ಟಿಯನ್ನು ಪ್ರತಿಬಿಂಬಿಸುತ್ತದೆ. ಈ ಅಧ್ಯಯನದಲ್ಲಿ ರೋಗಗಳನ್ನು ಅವುಗಳ ಉಗಮ ಮತ್ತು ಕಾರಣಗಳ ಆಧಾರದ ಮೇಲೆ ನಾಲ್ಕು ಪ್ರಮುಖ ವರ್ಗಗಳಾಗಿ ವಿಂಗಡಿಸಲಾಗಿದೆ.

### ನೈಸರ್ಗಿಕ ಅಥವಾ ದೈಹಿಕ ರೋಗಗಳು

ಈ ವರ್ಗದ ರೋಗಗಳು ದೇಹದ ಅಸಮತೋಲನ, ಪರಿಸರದ ಬದಲಾವಣೆ, ಆಹಾರ ಪದ್ಧತಿಯ ವ್ಯತ್ಯಾಸ, ಕಲುಷಿತ ನೀರಿನ ಸೇವನೆ, ಅತಿಯಾದ ಬಿಸಿಲು ಅಥವಾ ಚಳಿ ಹಾಗೂ ದೈಹಿಕ ಶ್ರಮದಿಂದ ಉಂಟಾಗುತ್ತವೆ ಎಂದು ಸೋಲಿಗರು ನಂಬುತ್ತಾರೆ. ಇಂತಹ ರೋಗಗಳಿಗೆ ಮುಖ್ಯವಾಗಿ ಗಿಡಮೂಲಿಕೆ ಔಷಧಿಗಳನ್ನು ಬಳಸಲಾಗುತ್ತದೆ. ಉದಾಹರಣೆಗಳು: ಶೀತ, ಕೆಮ್ಮು, ಸಾಮಾನ್ಯ ಜ್ವರ, ಹೊಟ್ಟೆನೋವು, ಭೇದಿ, ತಲೆನೋವು ಹಾಗೂ ಮೈ–ಕೈ ನೋವು.

### ದೈವಿಕ ಅಥವಾ ಧಾರ್ಮಿಕ ರೋಗಗಳು

ಕೆಲವು ರೋಗಗಳು ದೇವರ ಕೋಪ, ಪೂರ್ವಜರ ಅಸಮಾಧಾನ ಅಥವಾ ಧಾರ್ಮಿಕ ಆಚರಣೆಗಳ ಉಲ್ಲಂಘನೆಯಿಂದ ಉಂಟಾಗುತ್ತವೆ ಎಂಬುದು ಸೋಲಿಗರ ನಂಬಿಕೆಯಾಗಿದೆ. ಕುಲದೇವತೆಗೆ ಹರಕೆ ತೀರಿಸದಿರುವುದು, ಪೂರ್ವಜರ ಆರಾಧನೆಯನ್ನು ನಿರ್ಲಕ್ಷಿಸುವುದು ಅಥವಾ ಪವಿತ್ರ ಅರಣ್ಯದ ನಿಯಮಗಳನ್ನು ಉಲ್ಲಂಘಿಸುವುದು ಈ ರೋಗಗಳಿಗೆ ಕಾರಣವೆಂದು ಪರಿಗಣಿಸಲಾಗುತ್ತದೆ. ಇಂತಹ ಸಂದರ್ಭಗಳಲ್ಲಿ ಔಷಧೋಪಚಾರದ ಜೊತೆಗೆ ಪೂಜೆ, ಹರಕೆ ಮತ್ತು ಇತರ ಧಾರ್ಮಿಕ ಆಚರಣೆಗಳನ್ನು ನಡೆಸಲಾಗುತ್ತದೆ. ಉದಾಹರಣೆಗಳು: ಸಿಡುಬು, ಬಾಲಗ್ರಹ, ಕಾಲುಗಳ ಬಾವು, ಸಂತಾನಹೀನತೆ, ಮರು ಗರ್ಭಪಾತ, ದೃಷ್ಟಿಮಾಂದ್ಯತೆ, ಕಿವುಡುತನ ಹಾಗೂ ಕೆಲವು ಚರ್ಮರೋಗಗಳು. ಮಧುಮೇಹ, ಅಧಿಕ ರಕ್ತದೊತ್ತಡ, ಹೃದಯ ಸಂಬಂಧಿ ಕಾಯಿಲೆಗಳು ಮತ್ತು ಥೈರಾಯ್ಡ್‌ನಂತಹ ದೀರ್ಘಕಾಲೀನ ಕಾಯಿಲೆಗಳನ್ನೂ ಕೆಲವರು ಹೊಸ ರೋಗ ಎಂದು ಕರೆಯುತ್ತಾರೆ.

### ಅತೀಂದ್ರಿಯ ಅಥವಾ ಗಾಳಿ ರೋಗಗಳು

ಈ ವರ್ಗದ ರೋಗಗಳು ಕೆಟ್ಟ ದೃಷ್ಟಿ, ಮಾಟ–ಮಂತ್ರ, ದುಷ್ಟಶಕ್ತಿಗಳು ಅಥವಾ ಕಾಡಿನಲ್ಲಿ ಸಂಚರಿಸುವಾಗ ತಗುಲುವ ಗಾಳಿಯ ಪರಿಣಾಮದಿಂದ ಉಂಟಾಗುತ್ತವೆ ಎಂದು ನಂಬಲಾಗುತ್ತದೆ. ಇಂತಹ ರೋಗಗಳಿಗೆ ಮಂತ್ರವಾದಿಗಳು ಅಥವಾ ಧಾರ್ಮಿಕ ವೈದ್ಯರು ಚಿಕಿತ್ಸೆ ನೀಡುತ್ತಾರೆ. ಉದಾಹರಣೆಗಳು: ಹಠಾತ್ ಸುಸ್ತಾಗುವುದು, ಮೈ–ಕೈ ತಣ್ಣಗಾಗುವುದು, ಅಸಹಜವಾಗಿ ಮಾತನಾಡುವುದು ಅಥವಾ ವರ್ತಿಸುವುದು, ದೇಹ ಕ್ರಮೇಣ ಸೊರಗುವುದು, ತೀವ್ರ ಹೊಟ್ಟೆನೋವು, ನಿದ್ರೆಯಲ್ಲಿ ಚೀರಾಡುವುದು ಹಾಗೂ ದೇಹ ನಡುಗುವುದು.

### ಆಕಸ್ಮಿಕ ಅಥವಾ ಬಾಹ್ಯ ಸಂಕಷ್ಟಗಳಿಂದ ಉಂಟಾಗುವ ರೋಗಗಳು

ಅರಣ್ಯ ಜೀವನದಲ್ಲಿ ಎದುರಾಗುವ ಅಪಘಾತಗಳು ಮತ್ತು ಬಾಹ್ಯ ಕಾರಣಗಳಿಂದ ಉಂಟಾಗುವ ಗಾಯಗಳು ಹಾಗೂ ದೈಹಿಕ ತೊಂದರೆಗಳನ್ನು ಈ ವರ್ಗಕ್ಕೆ ಸೇರಿಸಲಾಗುತ್ತದೆ. ಇವುಗಳಿಗೆ ಗಿಡಮೂಲಿಕೆ ಔಷಧಿಗಳು, ಗಾಯದ ಆರೈಕೆ ಹಾಗೂ ಅಗತ್ಯವಿದ್ದಲ್ಲಿ ಸಾಂಪ್ರದಾಯಿಕ ಚಿಕಿತ್ಸಾ ವಿಧಾನಗಳನ್ನು ಅನುಸರಿಸಲಾಗುತ್ತದೆ. ಉದಾಹರಣೆಗಳು: ಕಾಡುಪ್ರಾಣಿಗಳ ದಾಳಿ, ವಿಷಕಾರಿ

ಹಾವು ಅಥವಾ ಇತರ ಜಂತುಗಳ ಕಚ್ಚುವಿಕೆ, ಮರದಿಂದ ಬೀಳುವುದು, ಕಲ್ಲು ಅಥವಾ ಮರದ ಗಾಯಗಳು ಹಾಗೂ ಇತರ ಆಕಸ್ಮಿಕ ದೈಹಿಕ ಗಾಯಗಳು.

**ಸೋಲಿಗ ಸಮುದಾಯದ ರೋಗನಿರ್ಣಯ ವಿಧಾನಗಳು**

ಸೋಲಿಗ ಬುಡಕಟ್ಟು ಸಮುದಾಯದ ಸಾಂಪ್ರದಾಯಿಕ ವೈದ್ಯಕೀಯ ವ್ಯವಸ್ಥೆಯಲ್ಲಿ ರೋಗನಿರ್ಣಯವು ಚಿಕಿತ್ಸೆಯ ಅತ್ಯಂತ ಪ್ರಮುಖ ಹಂತವಾಗಿದೆ. ಅವರ ದೃಷ್ಟಿಯಲ್ಲಿ ರೋಗವು ಕೇವಲ ದೈಹಿಕ ಸಮಸ್ಯೆಯಲ್ಲ; ಅದು ವ್ಯಕ್ತಿಯ ದೈಹಿಕ, ಮಾನಸಿಕ, ಸಾಮಾಜಿಕ, ಧಾರ್ಮಿಕ ಹಾಗೂ ಪರಿಸರ ಸಂಬಂಧಿತ ಅಂಶಗಳೊಂದಿಗೆ ನಿಕಟವಾಗಿ ಸಂಬಂಧ ಹೊಂದಿರುವ ಸ್ಥಿತಿಯಾಗಿದೆ. ಆದ್ದರಿಂದ, ರೋಗನಿರ್ಣಯ ಮಾಡುವಾಗ ವೈದ್ಯರು ರೋಗಿಯ ದೈಹಿಕ ಲಕ್ಷಣಗಳ ಜೊತೆಗೆ ಜೀವನಶೈಲಿ, ಆಹಾರ ಪದ್ಧತಿ, ವೃತ್ತಿ, ಅರಣ್ಯ ಪರಿಸರದ ಸಂಪರ್ಕ ಹಾಗೂ ಧಾರ್ಮಿಕ ನಂಬಿಕೆಗಳನ್ನೂ ಪರಿಗಣಿಸುತ್ತಾರೆ. ಈ ಪ್ರಕ್ರಿಯೆಯು ತಲೆಮಾರುಗಳಿಂದ ಬಂದ ಅನುಭವಾಧಾರಿತ ಜ್ಞಾನ, ಸೂಕ್ಷ್ಮ ಅವಲೋಕನ ಮತ್ತು ಪ್ರಕೃತಿಯೊಂದಿಗೆ ಹೊಂದಿರುವ ಆಪ್ತ ಸಂಬಂಧವನ್ನು ಆಧರಿಸಿದೆ. ಕ್ಷೇತ್ರ ಅಧ್ಯಯನದ ವೇಳೆ ದಾಖಲಿಸಲಾದ ಪ್ರಮುಖ ರೋಗನಿರ್ಣಯ ವಿಧಾನಗಳು ಈ ಕೆಳಗಿನಂತಿವೆ.

***ನಾಡಿ ಪರೀಕ್ಷೆ:*** ಸೋಲಿಗ ವೈದ್ಯರು ರೋಗಿಯ ಮಣಿಕಟ್ಟಿನ ನಾಡಿಯನ್ನು ಪರೀಕ್ಷಿಸಿ ಅದರ ವೇಗ, ಬಲ ಹಾಗೂ ಬಡಿತದ ಸ್ವರೂಪವನ್ನು ಗಮನಿಸುತ್ತಾರೆ. ಇದರ ಮೂಲಕ ದೇಹದಲ್ಲಿನ ವಾತ, ಪಿತ್ತ ಮತ್ತು ಕಫಗಳ ಸಮತೋಲನ, ರೋಗದ ಸ್ವರೂಪ ಹಾಗೂ ಅದರ ತೀವ್ರತೆಯನ್ನು ಅಂದಾಜು ಮಾಡುತ್ತಾರೆ. ನಾಡಿ ಪರೀಕ್ಷೆಯನ್ನು ರೋಗನಿರ್ಣಯದ ಅತ್ಯಂತ ವಿಶ್ವಾಸಾರ್ಹ ವಿಧಾನವೆಂದು ಪರಿಗಣಿಸಲಾಗುತ್ತದೆ.

***ಮೂತ್ರ ಪರೀಕ್ಷೆ:*** ಮೂತ್ರದ ಬಣ್ಣ, ಸಾಂದ್ರತೆ, ನೊರೆ ಹಾಗೂ ವಾಸನೆಯನ್ನು ಪರಿಶೀಲಿಸಿ ಆರೋಗ್ಯದ ಸ್ಥಿತಿಯನ್ನು ನಿರ್ಣಯಿಸಲಾಗುತ್ತದೆ. ಗಾಢ ಹಳದಿ ಬಣ್ಣದ ಮೂತ್ರವನ್ನು ದೇಹದಲ್ಲಿ ಉಷ್ಣತೆ ಹೆಚ್ಚಿರುವುದು ಅಥವಾ ಪಿತ್ತದ ಅಸಮತೋಲನದ ಸೂಚಕವೆಂದು ಪರಿಗಣಿಸುತ್ತಾರೆ. ಅತಿಯಾಗಿ ತಿಳಿ ಬಣ್ಣದ ಮೂತ್ರವು ಶೀತಸ್ವಭಾವದ ಸಮಸ್ಯೆಗಳನ್ನು ಸೂಚಿಸುತ್ತದೆ. ಕೆಂಪು ಛಾಯೆಯ ಮೂತ್ರವನ್ನು ಮೂತ್ರನಾಳದ ತೊಂದರೆ ಅಥವಾ ರಕ್ತಮಿಶ್ರಿತ ಸಮಸ್ಯೆಯ ಸಂಕೇತವೆಂದು ಗುರುತಿಸಲಾಗುತ್ತದೆ. ಸಾಂದ್ರ ಅಥವಾ ಮಂದ ಮೂತ್ರವು ಅಜೀರ್ಣ ಅಥವಾ ಜೀರ್ಣಕ್ರಿಯೆಯ ವ್ಯತ್ಯಾಸವನ್ನು ಸೂಚಿಸುತ್ತದೆ. ಮೂತ್ರದಲ್ಲಿ ಅತಿಯಾದ ನೊರೆ ಅಥವಾ ತೀವ್ರವಾದ ವಾಸನೆ ಕಂಡುಬಂದರೆ ದೇಹದಲ್ಲಿ ಆಂತರಿಕ ಸೋಂಕು ಅಥವಾ ದೀರ್ಘಕಾಲೀನ ಕಾಯಿಲೆಯ ಸಾಧ್ಯತೆಯನ್ನು ಊಹಿಸುತ್ತಾರೆ. ಕೆಲವು ಸಂದರ್ಭಗಳಲ್ಲಿ ವ್ಯಕ್ತಿಗೆ "ಮದ್ದು ಇಟ್ಟಿದ್ದಾರೆ" ಎಂಬ ಅನುಮಾನವಿದ್ದರೆ, ರೋಗಿಯ ಮೂತ್ರವನ್ನು ಒಂದು ಪಾತ್ರೆಯಲ್ಲಿ ಸಂಗ್ರಹಿಸಿ ಅದರಲ್ಲಿ ಹುಣಸೆ ಬೀಜಗಳನ್ನು ಹಾಕಿ ಮರುದಿನ ಅವುಗಳಲ್ಲಿ ಉಂಟಾಗುವ ಬದಲಾವಣೆಗಳ ಆಧಾರದ ಮೇಲೆ ತಮ್ಮ ಸಾಂಪ್ರದಾಯಿಕ ನಂಬಿಕೆಗೆ ಅನುಗುಣವಾಗಿ ನಿರ್ಧಾರ ಮಾಡುತ್ತಾರೆ.

***ಮಲ ಪರೀಕ್ಷೆ:*** ಮಲದ ಬಣ್ಣ, ಗಟ್ಟಿತನ ಹಾಗೂ ಸ್ವರೂಪವನ್ನು ಪರಿಶೀಲಿಸಿ ಜೀರ್ಣಕ್ರಿಯೆ, ಅಜೀರ್ಣ, ಹೊಟ್ಟೆಯ ತೊಂದರೆಗಳು ಹಾಗೂ ಕರುಳಿನ ಹುಳುಗಳಂತಹ ಸಮಸ್ಯೆಗಳನ್ನು ಗುರುತಿಸುತ್ತಾರೆ.

***ನಾಲಿಗೆಯ ಪರೀಕ್ಷೆ:*** ನಾಲಿಗೆಯ ಬಣ್ಣ, ಮೇಲಿನ ಪದರ, ತೇವಾಂಶ ಹಾಗೂ ಮೇಲ್ಮೈಯಲ್ಲಿನ ಬದಲಾವಣೆಗಳನ್ನು ಗಮನಿಸಿ ಆರೋಗ್ಯದ ಸ್ಥಿತಿಯನ್ನು ನಿರ್ಣಯಿಸುತ್ತಾರೆ. ವಿಪರೀತ ಬಿಳಿ ನಾಲಿಗೆಯನ್ನು ರಕ್ತಹೀನತೆ ಅಥವಾ ಕಫದ ಹೆಚ್ಚಳದ ಸಂಕೇತವೆಂದು, ಹಳದಿ ಛಾಯೆಯನ್ನು ಪಿತ್ತದ ಅಸಮತೋಲನ ಅಥವಾ ಯಕೃತ್ತಿನ ಸಮಸ್ಯೆಯ

ಸೂಚಕವೆಂದು, ಅತಿಯಾದ ಕೆಂಪು ಬಣ್ಣವನ್ನು ದೇಹದ ಉಷ್ಣತೆ ಅಥವಾ ಜ್ವರದ ಲಕ್ಷಣವೆಂದು ಪರಿಗಣಿಸುತ್ತಾರೆ. ನಾಲಿಗೆಯ ಮೇಲಿನ ದಪ್ಪ ಪದರವನ್ನು ಅಜೀರ್ಣದ ಸೂಚಕವಾಗಿ, ಒಣಗಿದ ನಾಲಿಗೆಯನ್ನು ನಿರ್ಜಲೀಕರಣದ ಸಂಕೇತವಾಗಿ ಹಾಗೂ ಸೀಳುಗಳು ಅಥವಾ ಸಣ್ಣ ಗುಳ್ಳೆಗಳನ್ನು ಜೀವಸತ್ವಗಳ ಕೊರತೆ ಅಥವಾ ದೇಹದ ಉಷ್ಣತೆಯ ಲಕ್ಷಣವೆಂದು ಗುರುತಿಸುತ್ತಾರೆ.

***ಧ್ವನಿ ಪರೀಕ್ಷೆ:*** ರೋಗಿಯ ಧ್ವನಿಯ ಏರಿಳಿತ, ಗಡಸುತನ ಹಾಗೂ ಮಾತನಾಡುವ ಶೈಲಿಯನ್ನು ಆಲಿಸಿ ಉಸಿರಾಟದ ತೊಂದರೆ, ದೈಹಿಕ ದುರ್ಬಲತೆ ಅಥವಾ ಮಾನಸಿಕ ಅಸ್ವಸ್ಥತೆಯನ್ನು ಅಂದಾಜು ಮಾಡುತ್ತಾರೆ.

***ಸ್ಪರ್ಶ ಪರೀಕ್ಷೆ:*** ವೈದ್ಯರು ರೋಗಿಯ ಹಣೆ, ಅಂಗೈ, ಪಾದ ಹಾಗೂ ದೇಹದ ಇತರ ಭಾಗಗಳನ್ನು ಸ್ಪರ್ಶಿಸಿ ದೇಹದ ಉಷ್ಣತೆ, ಊತ ಮತ್ತು ನೋವಿನ ತೀವ್ರತೆಯನ್ನು ಪರಿಶೀಲಿಸುತ್ತಾರೆ. ದೇಹದ ಒಂದು ಭಾಗ ಬಿಸಿಯಾಗಿದ್ದು ಮತ್ತೊಂದು ಭಾಗ ತಂಪಾಗಿದ್ದರೆ ಅದನ್ನು ಅಸಮತೋಲನದ ಲಕ್ಷಣವೆಂದು ಪರಿಗಣಿಸುತ್ತಾರೆ. ಊತವನ್ನು ಕೈಯಿಂದ ಒತ್ತಿ ಅದರ ಸ್ವರೂಪವನ್ನು ಗುರುತಿಸುತ್ತಾರೆ ಹಾಗೂ ಒತ್ತಿದಾಗ ಉಂಟಾಗುವ ನೋವಿನ ಆಧಾರದ ಮೇಲೆ ಆಂತರಿಕ ಗಾಯ ಅಥವಾ ಸೋಂಕಿನ ಸಾಧ್ಯತೆಯನ್ನು ನಿರ್ಧರಿಸುತ್ತಾರೆ. ವೈದ್ಯರ ಈ ವೈಯಕ್ತಿಕ ಸ್ಪರ್ಶವು ರೋಗಿಗೆ ಮಾನಸಿಕ ಧೈರ್ಯ ಮತ್ತು ವಿಶ್ವಾಸವನ್ನು ನೀಡುತ್ತದೆ ಎಂಬುದು ಸಮುದಾಯದ ನಂಬಿಕೆಯಾಗಿದೆ.

***ಕಣ್ಣಿನ ಪರೀಕ್ಷೆ:*** ಸೋಲಿಗ ವೈದ್ಯಕೀಯ ಪದ್ಧತಿಯಲ್ಲಿ ಕಣ್ಣುಗಳನ್ನು ದೇಹದ ಆರೋಗ್ಯದ ಪ್ರತಿಬಿಂಬವೆಂದು ಪರಿಗಣಿಸಲಾಗುತ್ತದೆ. ಕಣ್ಣಿನ ಬಿಳಿ ಭಾಗ ಹಳದಿಯಾಗಿದ್ದರೆ ಕಾಮಾಲೆ ಅಥವಾ ಪಿತ್ತದ ಅಸಮತೋಲನ, ಕೆಂಪಾಗಿದ್ದರೆ ದೇಹದ ಉಷ್ಣತೆ ಅಥವಾ ನಿದ್ರಾಹೀನತೆ, ಬಿಳಿಯಾಗಿದ್ದರೆ ರಕ್ತಹೀನತೆ, ಹೊಳಪು ಕಳೆದುಕೊಂಡಿದ್ದರೆ ದೀರ್ಘಕಾಲದ ಕಾಯಿಲೆ ಅಥವಾ ನಿರ್ಜಲೀಕರಣದ ಸೂಚಕವೆಂದು ನಿರ್ಣಯಿಸುತ್ತಾರೆ. ದೃಷ್ಟಿ ಅಸ್ಥಿರವಾಗಿದ್ದರೆ ಮಾನಸಿಕ ಅಸ್ವಸ್ಥತೆ ಅಥವಾ ಅತೀಂದ್ರಿಯ ಪ್ರಭಾವದ ಸಾಧ್ಯತೆಯನ್ನೂ ಪರಿಗಣಿಸುತ್ತಾರೆ.

***ನೋಟ ಪರೀಕ್ಷೆ:*** ರೋಗಿಯ ಮುಖದ ಕಾಂತಿ, ಚರ್ಮದ ಬಣ್ಣ, ದೇಹದ ಊತ, ಕುಳಿತುಕೊಳ್ಳುವ ಹಾಗೂ ನಡೆಯುವ ರೀತಿ, ದೈಹಿಕ ಭಂಗಿ ಮತ್ತು ಒಟ್ಟಾರೆ ವರ್ತನೆಯನ್ನು ಸೂಕ್ಷ್ಮವಾಗಿ ಗಮನಿಸಿ ರೋಗದ ಸ್ವರೂಪವನ್ನು ಅಂದಾಜು ಮಾಡುತ್ತಾರೆ. ಕಾಲು ಎಳೆಯುತ್ತಾ ನಡೆಯುವುದು, ಸಮತೋಲನ ಕಳೆದುಕೊಳ್ಳುವುದು ಅಥವಾ ಅಸಹಜ ದೇಹಭಂಗಿ ಕಂಡುಬಂದರೆ ನರಮಂಡಲ ಅಥವಾ ವಾತ ಸಂಬಂಧಿತ ಸಮಸ್ಯೆಗಳ ಲಕ್ಷಣವೆಂದು ಪರಿಗಣಿಸುತ್ತಾರೆ.

***ಪ್ರಶ್ನೋತ್ತರ ವಿಧಾನ:*** ರೋಗನಿರ್ಣಯದ ಅಂತಿಮ ಹಂತದಲ್ಲಿ ವೈದ್ಯರು ರೋಗಿಯ ಜೀವನಶೈಲಿಯ ಕುರಿತು ವಿವರವಾಗಿ ಪ್ರಶ್ನಿಸುತ್ತಾರೆ. ಇತ್ತೀಚೆಗೆ ಯಾವ ಅರಣ್ಯ ಪ್ರದೇಶಗಳಿಗೆ ತೆರಳಿದ್ದರು, ಯಾವ ಸಸ್ಯಗಳು ಅಥವಾ ಪ್ರಾಣಿಗಳ ಸಂಪರ್ಕಕ್ಕೆ ಬಂದಿದ್ದರು, ಯಾವ ಆಹಾರ ಸೇವಿಸಿದ್ದರು, ಯಾವಾಗಿನಿಂದ ಲಕ್ಷಣಗಳು ಆರಂಭವಾದವು ಹಾಗೂ ಹಿಂದಿನ ಚಿಕಿತ್ಸೆಗಳ ಕುರಿತು ಮಾಹಿತಿ ಪಡೆದು ಅಂತಿಮ ನಿರ್ಣಯಕ್ಕೆ ಬರುತ್ತಾರೆ.

**ಸೋಲಿಗರ ವೈದ್ಯಪದ್ಧತಿಯಲ್ಲಿ ಚಿಕಿತ್ಸಾ ಸಂಹಿತೆ**

ಸೋಲಿಗ ಬುಡಕಟ್ಟು ಸಮುದಾಯದ ಚಿಕಿತ್ಸಾ ಪದ್ಧತಿಯು ಕೇವಲ ಔಷಧ ನೀಡುವುದಕ್ಕೆ ಸೀಮಿತವಾಗಿಲ್ಲ. ಔಷಧ ನೀಡುವ ಸಮಯ, ಔಷಧದ ತಯಾರಿಕೆ, ಸೇವಿಸುವ ವಿಧಾನ, ಪಥ್ಯ, ರೋಗಿಯ ಆರೈಕೆ ಹಾಗೂ ವೈದ್ಯರ ವೃತ್ತಿಪರ ನೈತಿಕತೆ ಇವೆಲ್ಲವೂ ಚಿಕಿತ್ಸಾ ಸಂಹಿತೆಯ ಪ್ರಮುಖ ಭಾಗಗಳಾಗಿವೆ. ಅವರ ಚಿಕಿತ್ಸಾ ಕ್ರಮವು ತಲೆಮಾರುಗಳಿಂದ ಬಂದ ಅನುಭವಾಧಾರಿತ ಜ್ಞಾನದ ಮೇಲೆ ಆಧಾರಿತವಾಗಿದ್ದು, ಔಷಧಿಯ ಪರಿಣಾಮಕಾರಿತ್ವವನ್ನು ಹೆಚ್ಚಿಸಲು ಹಾಗೂ

ರೋಗಿಯ ಶೀಘ್ರ ಚೇತರಿಕೆಗೆ ಸಹಕಾರಿಯಾಗುವ ನಿಯಮಗಳನ್ನು ಒಳಗೊಂಡಿದೆ.

ಗಿಡಮೂಲಿಕೆಗಳಿಂದ ತಯಾರಿಸಲಾದ ಕೆಲವು ಪ್ರಬಲ ಔಷಧಿಗಳನ್ನು, ವಿಶೇಷವಾಗಿ ವಿಷಕಾರಿ ಕಾಯಿಲೆಗಳು ಅಥವಾ ಹೊಟ್ಟೆ ಸಂಬಂಧಿತ ತೊಂದರೆಗಳಿಗೆ, ನಸುಕಿನ ಜಾವ ಅಥವಾ ಖಾಲಿ ಹೊಟ್ಟೆಯಲ್ಲಿ ಸೇವಿಸಲು ಸೂಚಿಸಲಾಗುತ್ತದೆ. ದೇಹವು ತಂಪಾಗಿರುವ ಸಂದರ್ಭದಲ್ಲಿ ಔಷಧಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತದೆ ಎಂಬುದು ಅವರ ಅನುಭವಾಧಾರಿತ ನಂಬಿಕೆಯಾಗಿದೆ. ಗಿಡಮೂಲಿಕೆಗಳನ್ನು ನೇರವಾಗಿ ನೀಡದೆ, ರೋಗದ ಸ್ವರೂಪ ಮತ್ತು ತೀವ್ರತೆಗೆ ಅನುಗುಣವಾಗಿ ಹಾಲು, ಬೆಲ್ಲ, ಕಲ್ಲುಸಕ್ಕರೆ ಅಥವಾ ಜೇನುತುಪ್ಪದೊಂದಿಗೆ ಬೆರೆಸಿ ನೀಡಲಾಗುತ್ತದೆ. ಇದರಿಂದ ಔಷಧಿಯ ಕಹಿತನ ಮತ್ತು ತೀಕ್ಷ್ಣತೆ ಕಡಿಮೆಯಾಗುವುದರ ಜೊತೆಗೆ ದೇಹಕ್ಕೆ ಸುಲಭವಾಗಿ ಹೊಂದಿಕೊಳ್ಳುತ್ತದೆ ಎಂದು ಸೋಲಿಗರು ನಂಬುತ್ತಾರೆ.

ಗಂಭೀರ ಕಾಯಿಲೆಗಳು ಅಥವಾ ಪ್ರಬಲ ಔಷಧಿಗಳನ್ನು ನೀಡುವ ಸಂದರ್ಭದಲ್ಲಿ ರೋಗಿಯನ್ನು ಕೆಲವು ದಿನಗಳವರೆಗೆ ವಿಶ್ರಾಂತಿಯಲ್ಲಿ ಇರಿಸಿ, ಹೊರಗಿನವರ ಸಂಪರ್ಕವನ್ನು ಸಾಧ್ಯವಾದಷ್ಟು ಕಡಿಮೆ ಮಾಡಲು ಸೂಚಿಸುತ್ತಾರೆ. ಸಮುದಾಯದ ನಂಬಿಕೆಯ ಪ್ರಕಾರ, ಬೇರೆಯವರ ಅತಿಯಾದ ಸಂಪರ್ಕ ಅಥವಾ ಪರಿಸರದ ಪ್ರಭಾವವು ಔಷಧಿಯ ಪರಿಣಾಮವನ್ನು ಕುಗ್ಗಿಸಬಹುದು. ಆದ್ದರಿಂದ ಚಿಕಿತ್ಸೆಯ ಅವಧಿಯಲ್ಲಿ ರೋಗಿಯು ವೈದ್ಯರ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕೆಂದು ತಿಳಿಸಲಾಗುತ್ತದೆ.

***ಪಥ್ಯದ ನಿಯಮಗಳು***

ಸೋಲಿಗರ ಚಿಕಿತ್ಸಾ ಪದ್ಧತಿಯಲ್ಲಿ ಪಥ್ಯಕ್ಕೆ ವಿಶೇಷ ಮಹತ್ವವಿದೆ. ಪಥ್ಯವನ್ನು ಮುಖ್ಯವಾಗಿ ಎರಡು ವಿಧಗಳಾಗಿ ಅನುಸರಿಸಲಾಗುತ್ತದೆ. ಮೊದಲನೆಯದು ಬಿಳಿ ಮತ್ತು ಕಪ್ಪು ಪಥ್ಯ. ಈ ಸಂದರ್ಭದಲ್ಲಿ ರೋಗಿಗೆ ಉಪ್ಪು, ಖಾರ ಹಾಗೂ ಕೆಲವು ನಿರ್ದಿಷ್ಟ ಆಹಾರಗಳನ್ನು ಸಂಪೂರ್ಣವಾಗಿ ವರ್ಜ್ಯಗೊಳಿಸಲಾಗುತ್ತದೆ. ಕೆಲವು ಕಾಯಿಲೆಗಳಲ್ಲಿ ಕೇವಲ ರಾಗಿ ಅಂಬಲಿ ಅಥವಾ ಸುಲಭವಾಗಿ ಜೀರ್ಣವಾಗುವ ಆಹಾರವನ್ನು ಮಾತ್ರ ಸೇವಿಸಲು ಸೂಚಿಸಲಾಗುತ್ತದೆ. ಎರಡನೆಯದಾಗಿ, ಚಿಕಿತ್ಸೆಯ ಅವಧಿಯಲ್ಲಿ ಬಿಸಿನೀರನ್ನೇ ಕುಡಿಯಲು ಸಲಹೆ ನೀಡಲಾಗುತ್ತದೆ. ಇದರಿಂದ ದೇಹದ ಶುದ್ಧೀಕರಣ ಸುಗಮವಾಗಿ ನಡೆಯುತ್ತದೆ ಹಾಗೂ ಔಷಧಿಯ ಪರಿಣಾಮಕಾರಿತ್ವ ಹೆಚ್ಚುತ್ತದೆ ಎಂಬುದು ಅವರ ನಂಬಿಕೆಯಾಗಿದೆ.

***ವೈದ್ಯರ ವೃತ್ತಿಪರ ನೈತಿಕತೆ***

ಸೋಲಿಗ ಸಾಂಪ್ರದಾಯಿಕ ವೈದ್ಯರು ತಮ್ಮ ವೈದ್ಯಕೀಯ ಜ್ಞಾನವನ್ನು ಸೇವೆಯ ರೂಪದಲ್ಲಿ ಪರಿಗಣಿಸುತ್ತಾರೆ. ಚಿಕಿತ್ಸೆಗೆ ಅವರು ಯಾವುದೇ ನಿಗದಿತ ಶುಲ್ಕವನ್ನು ವಿಧಿಸುವುದಿಲ್ಲ. ಚಿಕಿತ್ಸೆಯ ನಂತರ ರೋಗಿ ಅಥವಾ ಕುಟುಂಬದವರು ತಮ್ಮ ಇಚ್ಛೆಯಂತೆ ನೀಡುವ ಕಾಣಿಕೆಯನ್ನು ಮಾತ್ರ ಸ್ವೀಕರಿಸುತ್ತಾರೆ. ಪ್ರತಿಫಲಕ್ಕಾಗಿ ಒತ್ತಾಯಿಸದಿರುವ ಈ ನಡೆ ಅವರ ಸೇವಾಭಾವ, ಸಾಮಾಜಿಕ ಹೊಣೆಗಾರಿಕೆ ಮತ್ತು ಉನ್ನತ ವೃತ್ತಿಪರ ನೈತಿಕತೆಯನ್ನು ಪ್ರತಿಬಿಂಬಿಸುತ್ತದೆ.

***ಚಿಕಿತ್ಸೆಯ ನಂತರದ ಆರೈಕೆ***

ಔಷಧಿ ನೀಡಿದ ನಂತರ ವೈದ್ಯರು ರೋಗಿಯ ಚೇತರಿಕೆಯ ಲಕ್ಷಣಗಳನ್ನು ನಿರಂತರವಾಗಿ ಗಮನಿಸುತ್ತಾರೆ. ರೋಗಿಗೆ ಬೆವರು ಬರುವುದು, ವಾಂತಿ ಆಗುವುದು, ಉತ್ತಮ ನಿದ್ರೆ ಬರುವುದು ಅಥವಾ ದೈಹಿಕ ಹಗುರತನ ಅನುಭವಿಸುವುದು ಚಿಕಿತ್ಸೆಯು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿರುವ ಸೂಚನೆಗಳೆಂದು ಪರಿಗಣಿಸಲಾಗುತ್ತದೆ. ಇಂತಹ ಲಕ್ಷಣಗಳನ್ನು ವಿವರಿಸುವ ಮೂಲಕ ವೈದ್ಯರು ರೋಗಿಗೆ ಮಾನಸಿಕ ಧೈರ್ಯ ಮತ್ತು ವಿಶ್ವಾಸವನ್ನು ತುಂಬುತ್ತಾರೆ. ಈ ರೀತಿಯ ನಿರಂತರ ಮೇಲ್ವಿಚಾರಣೆ ಮತ್ತು ಸಮಾಲೋಚನೆಯು ಸೋಲಿಗರ ಚಿಕಿತ್ಸಾ ಪದ್ಧತಿಯ ವಿಶಿಷ್ಟ ಲಕ್ಷಣವಾಗಿದೆ.

**ಚರ್ಚೆ ಮತ್ತು ವಿಶ್ಲೇಷಣೆ**

ಸೋಲಿಗ ಬುಡಕಟ್ಟು ಸಮುದಾಯದ ಆರೋಗ್ಯ ರಕ್ಷಣಾ ಮಾದರಿಯನ್ನು ಸೂಕ್ಷ್ಮವಾಗಿ ಗಮನಿಸಿದಾಗ, ಅದು ಕೇವಲ ರೋಗಲಕ್ಷಣಗಳಿಗೆ ತಾತ್ಕಾಲಿಕವಾಗಿ ಚಿಕಿತ್ಸೆ ನೀಡುವ ಪ್ರಕ್ರಿಯೆಯಲ್ಲ, ಬದಲಿಗೆ ಪ್ರಕೃತಿ, ಮನುಷ್ಯ ಮತ್ತು ಸಾಂಸ್ಕೃತಿಕ ಚೌಕಟ್ಟುಗಳ ನಡುವಿನ ಸಮತೋಲನವನ್ನು ಆಧರಿಸಿದ ಒಂದು ವ್ಯವಸ್ಥಿತ ಜ್ಞಾನ ಮೀಮಾಂಸೆಯಾಗಿದೆ ಎಂಬುದು ಸ್ಪಷ್ಟವಾಗುತ್ತದೆ. ಆಧುನಿಕ ವೈದ್ಯಕೀಯ ಲೋಕವು ರೋಗಗಳನ್ನು ಕೇವಲ ಜೈವಿಕ (Biological) ಕಾರಣಗಳ ಹಿನ್ನೆಲೆಯಲ್ಲಿ ವಿಶ್ಲೇಷಿಸಿದರೆ, ಸೋಲಿಗ ವೈದ್ಯ ಪದ್ಧತಿಯು ರೋಗಗಳನ್ನು ಸಾಂಸ್ಕೃತಿಕ ಗ್ರಹಿಕೆಗಳ (Cultural Perceptions) ಮೂಲಕ ನೋಡುತ್ತದೆ. ಈ ವಿಶಿಷ್ಟ ಮಾದರಿಯನ್ನು ವೈದ್ಯಕೀಯ ಮಾನವಶಾಸ್ತ್ರದ ಪ್ರಮುಖ ಸಿದ್ಧಾಂತಗಳಾದ "ಎತ್ನೋ–ಮೆಡಿಕಲ್ ಸಿಸ್ಟಮ್" (Ethno-medical System) ಮೂಲಕ ಸುಲಭವಾಗಿ ವಿಶ್ಲೇಷಿಸಬಹುದು. ರೋಗಗಳನ್ನು ನೈಸರ್ಗಿಕ, ದೈವಿಕ, ಅತೀಂದ್ರಿಯ ಮತ್ತು ಆಕಸ್ಮಿಕ ಎಂದು ನಾಲ್ಕು ಆಯಾಮಗಳಲ್ಲಿ ವಿಂಗಡಿಸುವ ಅವರ ಕ್ರಮವು ವೈದ್ಯಕೀಯ ಮಾನವಶಾಸ್ತ್ರದಲ್ಲಿ ಉಲ್ಲೇಖಿಸಲಾಗುವ "ವೈಯಕ್ತಿಕ ಮತ್ತು ನೈಸರ್ಗಿಕ ರೋಗವಿಜ್ಞಾನ ಸಿದ್ಧಾಂತಕ್ಕೆ" (Personalistic and Naturalistic Etiology Systems) ಸಂಪೂರ್ಣವಾಗಿ ಹೊಂದಿಕೆಯಾಗುತ್ತದೆ. ಇಲ್ಲಿ ರೋಗ ಎನ್ನುವುದು ಕೇವಲ ದೇಹದ ಏರುಪೇರಲ್ಲ, ಬದಲಿಗೆ ಪ್ರಕೃತಿ, ಮನುಷ್ಯ ಮತ್ತು ಸಾಂಸ್ಕೃತಿಕ ನಿಯಮಗಳ ನಡುವಿನ ಸಹಜ ಸಂಬಂಧದಲ್ಲಿ ಉಂಟಾಗುವ ವ್ಯತ್ಯಯ ಎಂಬ 'ಕಾರಣ ಮತ್ತು ಪರಿಣಾಮ'ದ (Cause and Effect) ದಾರ್ಶನಿಕ ತತ್ವದ ಮೇಲೆ ಈ ವ್ಯವಸ್ಥೆ ರೂಪಿತಗೊಂಡಿದೆ.

ಐತಿಹಾಸಿಕವಾಗಿ ಮತ್ತು ತಾತ್ವಿಕವಾಗಿ ಗಮನಿಸಿದಾಗ, ಸೋಲಿಗ ಬುಡಕಟ್ಟು ಸಮುದಾಯದ ಸಾಂಪ್ರದಾಯಿಕ ವೈದ್ಯಕೀಯ ಜ್ಞಾನವು ಭಾರತದ ಪ್ರಾಚೀನ ವೈದ್ಯಕೀಯ ಪದ್ಧತಿಯಾದ ಆಯುರ್ವೇದ ಮತ್ತು 'ಚರಕ ಸಂಹಿತೆ'ಯ ಮೂಲ ತತ್ವಗಳೊಂದಿಗೆ ಆಳವಾದ ಸಾಮ್ಯತೆಯನ್ನು ಹೊಂದಿದೆ. ಆಯುರ್ವೇದವು ಪ್ರಕೃತಿ ಮತ್ತು ಮಾನವನ ಶರೀರವನ್ನು ವಾತ, ಪಿತ್ತ, ಕಫ ಎಂಬ ತ್ರಿದೋಷಗಳ (Tridosha Theory) ಆಧಾರದ ಮೇಲೆ ವಿಶ್ಲೇಷಿಸಿದರೆ, ಸೋಲಿಗ ವೈದ್ಯರು ಕೂಡ ಯಾವುದೇ ಗ್ರಂಥಗಳನ್ನು ಓದದಿದ್ದರೂ ತಲೆಮಾರುಗಳ ಅನುಭವದಿಂದ ಇದೇ ರೀತಿಯ ದೈಹಿಕ ಧಾತುಗಳ ಏರುಪೇರನ್ನು ನಾಡಿಯ ಮೂಲಕ ಪತ್ತೆಹಚ್ಚುತ್ತಾರೆ. ಚರಕ ಸಂಹಿತೆಯಲ್ಲಿ ಉಲ್ಲೇಖಿಸಲಾಗಿರುವ "ಯತ್ರಾಶ್ರಿತಾ ಕರ್ಮಗುಣಾಃ ಕಾರಣಂ ಸಮವಾಯಿ ಯತ್" ಅಂದರೆ ಪರಿಸರದಲ್ಲಿರುವ ಪ್ರತಿಯೊಂದು ಸಸ್ಯವೂ ಔಷಧೀಯ ಗುಣವನ್ನು ಹೊಂದಿದೆ ಎಂಬ ತತ್ವವು ಸೋಲಿಗರ ಸಾಂಪ್ರದಾಯಿಕ ಪರಿಸರ ಜ್ಞಾನದಲ್ಲಿ (Traditional Ecological Knowledge - TEK) ಅಕ್ಷರಶಃ ಪ್ರತಿಫಲಿಸುತ್ತದೆ. ಶತಮಾನಗಳಿಂದ ಯಾವುದೇ ಬಾಹ್ಯ ಸಂಪರ್ಕವಿಲ್ಲದ ದಟ್ಟಾರಣ್ಯದಲ್ಲಿ ಬದುಕುಳಿಯಲು ಅವರು ಕಂಡುಕೊಂಡ ಈ ಜ್ಞಾನವು, ಪ್ರಕೃತಿಯನ್ನು ದೇವರೆಂದು ಭಾವಿಸುವ ಚರಕನ ಚಿಕಿತ್ಸಾ ದರ್ಶನಕ್ಕೆ ಅತ್ಯಂತ ಹತ್ತಿರವಾಗಿದೆ. ಹೀಗಾಗಿ ಸೋಲಿಗರ ಈ ಮೌಖಿಕ ಪರಂಪರೆಯು ಕೇವಲ ಒಂದು ಸ್ಥಳೀಯ ನಂಬಿಕೆಯಾಗಿ ಉಳಿಯದೆ, ಭಾರತೀಯ ಶಾಸ್ತ್ರೀಯ ವೈದ್ಯಕೀಯ ಇತಿಹಾಸದ ಮೂಲ ಬೇರುಗಳೊಂದಿಗೆ ಅವಿನಾಭಾವ ಸಂಬಂಧವನ್ನು ಹೊಂದಿದೆ ಎಂಬುದನ್ನು ಈ ವಿಶ್ಲೇಷಣೆಯು ದೃಢಪಡಿಸುತ್ತದೆ.

ಯಾವುದೇ ಆಧುನಿಕ ಪ್ರಯೋಗಾಲಯ ಅಥವಾ ತಾಂತ್ರಿಕ ಉಪಕರಣಗಳಿಲ್ಲದ ಯುಗದಲ್ಲೂ ಸೋಲಿಗ ವೈದ್ಯರು ರೂಪಿಸಿಕೊಂಡಿರುವ ತಾಂತ್ರಿಕೇತರ ರೋಗನಿರ್ಣಯ ಪದ್ಧತಿಗಳ ಹಿಂದೆ ಆಳವಾದ ಪ್ರಾಯೋಗಿಕ ವಿಜ್ಞಾನವಿದೆ. ಕೇವಲ ನಾಡಿಮಿಡಿತದ

ವೇಗ ಮತ್ತು ಲಯವನ್ನು ಅಳೆಯುವ ಅವರ ತಂತ್ರವು ಮಾನವನ ಹೃದಯ ರಕ್ತನಾಳದ ವ್ಯವಸ್ಥೆ (Cardiovascular System) ಮತ್ತು ರೋಗದ ತೀವ್ರತೆಗೆ ಇರುವ ವೈಜ್ಞಾನಿಕ ಸಂಬಂಧವನ್ನು ಪ್ರತಿಬಿಂಬಿಸುತ್ತದೆ. ಹಾಗೆಯೇ, ಮೂತ್ರದ ಬಣ್ಣ, ಸಾಂದ್ರತೆ ಮತ್ತು ಬದಲಾವಣೆಗಳನ್ನು ಗಮನಿಸುವ ಅವರ ವಿಧಾನವು ಆಧುನಿಕ ವೈದ್ಯಕೀಯದ "ಯೂರಿನಾಲಿಸಿಸ್" (Urinalysis) ಅಥವಾ ಮೂತ್ರ ಪರೀಕ್ಷೆಯ ಪ್ರಾಥಮಿಕ ವೈಜ್ಞಾನಿಕ ರೂಪವಾಗಿದೆ. ನಾಲಿಗೆಯ ಬಣ್ಣ ಮತ್ತು ಕಣ್ಣಿನ ದೃಶ್ಯ ಲಕ್ಷಣಗಳ ಮೂಲಕ ರೋಗದ ಮೂಲ ಪತ್ತೆಹಚ್ಚುವ ಅವರ ಸಾಮರ್ಥ್ಯವು ತಲೆಮಾರುಗಳ ಅನುಭವಜನ್ಯ ಜ್ಞಾನದ ವೈಜ್ಞಾನಿಕ ಚೌಕಟ್ಟನ್ನು ಸಾಬೀತುಪಡಿಸುತ್ತದೆ. ರೋಗಿಯ ಇತ್ತೀಚಿನ ಅರಣ್ಯ ಸಂಚಾರ ಮತ್ತು ಆಹಾರ ಪದ್ಧತಿಯನ್ನು ಪ್ರಶ್ನಾವಳಿಗಳ ಮೂಲಕ ವಿಚಾರಣೆ ನಡೆಸುವ ವಿಧಾನವು ಆಧುನಿಕ ವೈದ್ಯಕೀಯದ 'ಕೇಸ್ ಹಿಸ್ಟರಿ' (Case History) ಸಂಗ್ರಹಣೆಗೆ ಸಮನಾಗಿ ಕಾರ್ಯನಿರ್ವಹಿಸುತ್ತದೆ.

ಸೋಲಿಗ ಸಮುದಾಯದಲ್ಲಿ ಚಿಕಿತ್ಸಾ ಜ್ಞಾನದ ಆಧಾರದ ಮೇಲೆ ವೈದ್ಯರನ್ನು ಗಿಡಮೂಲಿಕೆ ವೈದ್ಯರು, ಧಾರ್ಮಿಕ ವೈದ್ಯರು ಮತ್ತು ಸೂಲಗಿತ್ತಿ ಎಂದು ವರ್ಗೀಕರಿಸಿರುವ ವಿಧಾನವು ಜ್ಞಾನದ ವಿಕೇಂದ್ರೀಕರಣ ಮತ್ತು ಶ್ರೇಣೀಕೃತ ಶಿಸ್ತನ್ನು ತೋರಿಸುತ್ತದೆ. ವಿಶೇಷವಾಗಿ, ಹೆಚ್ಚು ಶಕ್ತಿಯುತ ಔಷಧಿಗಳನ್ನು ನೀಡುವಾಗ ಅನುಸರಿಸುವ ಕಟ್ಟುನಿಟ್ಟಿನ 'ಬಿಳಿ ಮತ್ತು ಕಪ್ಪು ಪಥ್ಯ'ದ ನಿಯಮಗಳು ರೋಗದ ಗುಣಪಡಿಕೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಇಂದಿನ ವಾಣಿಜ್ಯೀಕೃತ ವೈದ್ಯಕೀಯ ಜಗತ್ತಿಗೆ ಹೋಲಿಸಿದರೆ, ಚಿಕಿತ್ಸೆಗೆ ಯಾವುದೇ ನಿರ್ದಿಷ್ಟ ಬೆಲೆ ಕಟ್ಟದೆ ಕೇವಲ ಸಮುದಾಯದ ಸೇವೆಯಾಗಿ ಕಾರ್ಯನಿರ್ವಹಿಸುವ ಸೋಲಿಗ ವೈದ್ಯರ ವೃತ್ತಿಪರ ನೈತಿಕತೆಯು ಉನ್ನತ ಮಾನವೀಯ ಮೌಲ್ಯಗಳನ್ನು ಪ್ರತಿನಿಧಿಸುತ್ತದೆ. ಇಂದಿನ ಜಾಗತೀಕರಣದ ಯುಗದಲ್ಲಿ ಇವರ ಪದ್ಧತಿಯು ಆಧುನಿಕ ಆಲೋಪತಿ ವೈದ್ಯಕೀಯದೊಂದಿಗೆ ಸಹ–ಅಸ್ತಿತ್ವವನ್ನು ಪಡೆದುಕೊಳ್ಳುತ್ತಿದ್ದು, ಇದನ್ನು ವೈಜ್ಞಾನಿಕವಾಗಿ "ವೈದ್ಯಕೀಯ ಬಹುತ್ವ" (Medical Pluralism) ಎಂದು ಕರೆಯಲಾಗುತ್ತದೆ. ಆದ್ದರಿಂದ, ಕಣ್ಮರೆಯಾಗುತ್ತಿರುವ ಈ ವಿಶಿಷ್ಟ ಬುಡಕಟ್ಟು ಚಿಕಿತ್ಸಾ ಮಾದರಿಯನ್ನು ಸಂರಕ್ಷಿಸುವುದು ಜಾಗತಿಕ ವೈದ್ಯಕೀಯ ಇತಿಹಾಸದ ದೃಷ್ಟಿಯಿಂದ ಅತ್ಯಂತ ಪ್ರಸ್ತುತವಾಗಿದೆ.

**ಉಪಸಂಹಾರ**

ಸೋಲಿಗ ಬುಡಕಟ್ಟು ಸಮುದಾಯದ ಸಾಂಪ್ರದಾಯಿಕ ವೈದ್ಯಕೀಯ ಜ್ಞಾನವು ಕೇವಲ ನಂಬಿಕೆಯಲ್ಲ, ಬದಲಿಗೆ ಆಯುರ್ವೇದದ ತತ್ವಗಳಿಗೆ ಹತ್ತಿರವಾಗಿರುವ ಒಂದು ವ್ಯವಸ್ಥಿತ ಅನುಭವಜನ್ಯ ವಿಜ್ಞಾನವಾಗಿದೆ. ಯಾವುದೇ ತಂತ್ರಜ್ಞಾನವಿಲ್ಲದೆ ಕೇವಲ ನಾಡಿ, ಮೂತ್ರ ಮತ್ತು ದೈಹಿಕ ಲಕ್ಷಣಗಳ ಮೂಲಕ ರೋಗ ಪತ್ತೆಹಚ್ಚುವ ಅವರ ವಿಧಾನಗಳು ಮತ್ತು ಕಟ್ಟುನಿಟ್ಟಿನ ಚಿಕಿತ್ಸಾ ಸಂಹಿತೆಗಳು ಈ ಬುಡಕಟ್ಟು ವೈದ್ಯ ಪದ್ಧತಿಯ ಶಿಸ್ತನ್ನು ಸಾಬೀತು ಪಡಿಸುತ್ತವೆ. ಇಂದಿನ ವಾಣಿಜ್ಯೀಕೃತ ಯುಗದಲ್ಲಿ, ಚಿಕಿತ್ಸೆಗೆ ಬೆಲೆ ಕಟ್ಟದ ಅವರ ವೃತ್ತಿಪರ ನೈತಿಕತೆಯು ಅತ್ಯಂತ ಮಾದರಿಯಾದದ್ದಾಗಿದೆ. ಈ ಅಮೂಲ್ಯ ಜ್ಞಾನವು ಕೇವಲ ಮೌಖಿಕ ಪರಂಪರೆಯಲ್ಲಿ ಇರುವುದರಿಂದ, ಅದನ್ನು ಈಗಲೇ ಶೈಕ್ಷಣಿಕವಾಗಿ ದಾಖಲಿಸಿ ಸಂರಕ್ಷಿಸುವುದು ಅತ್ಯಂತ ತುರ್ತು ಮತ್ತು ಅವಶ್ಯಕವಾಗಿದೆ.

**ಪರಾಮರ್ಶನ ಗ್ರಂಥಗಳು**


- ಜೋಶಿ, ಎಸ್. ಆರ್. (2015). *ಕರ್ನಾಟಕದ ಬುಡಕಟ್ಟುಗಳ ಸಾಂಪ್ರದಾಯಿಕ ವೈದ್ಯಕೀಯ ಜ್ಞಾನ.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

- Agnivesha. (2020). *Charaka Samhita* (Chikitsa Sthana). Chowkhamba Krishnadas Academy.
- Foster, G. M. (1976). Disease etiologies in non-Western medical systems. *American Anthropologist, 78*(4), 773–782. https://doi.org/10.1525/aa.1976.78.4.02a00030
- Foster, G. M., & Anderson, B. G. (1978). *Medical anthropology*. John Wiley & Sons.
- Madegowda, C. (2009). Traditional knowledge and conservation of biodiversity for sustainable livelihoods by Soligas of B.R. Hills, Karnataka. *Journal of Human Ecology, 25*(3), 159–169.
- Morab, S. G. (1977). *The Soliga of Biligirirangana Hills*. Anthropological Survey of India.
- Morinis, A., & Brilliant, G. (1981). Smallpox in Northern India: Diversity and order in a regional medical system. *Medical Anthropology, 5*(3), 341–365.
- Mundoli, S., et al. (2016). Transition of Soliga tribal ecology and dietary systems in B.R. Hills. *Journal of Ethnobiology, 36*(2), 245–262.
- Sujaya, M. (2018). Knowledge of medicinal plants and traditional assets inherited from ancestors among the Soliga tribe of Karnataka. *Journal of Astha Foundation, 14*(2), 85–92.